# ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 31-10-2022

## ಚಿಟಗುಪ್ಪಾ ಪೊಲೀಸ ಠಾಣೆ: ಯು.ಡಿ.ಆರ್. ಸಂಖ್ಯೆ:22/2022: 174 ಸಿ ಆರ್ ಪಿ ಸಿ:

ದಿನಾಂಕ:30/10/2022 ರಂದು ಮುಂಜಾನೆ 11.00 ಗಂಟೆಗೆ ಫಿರ್ಯಾದಿ ಕಾವೇರಿ ಗಂಡ ಶಿವಕುಮಾರ ಮಲ್ಲಶೆಟ್ಟಿ ವಯ:35 ವರ್ಷ, ಜಾ:ಉಪಾರ, ಸಾ:ಶಿವಪೂರ ಗಲ್ಲಿ ಹುಮನಾಬಾದ ರವರು ಠಾಣೆಗೆ ಹಾಜರಾಗಿ ನೀಡಿದ ದೂರನ್ನು ಪಡೆದುಕೊಂಡು ಸದರಿ ದೂರಿನ ಸಾರಂಶವೆನೆಂದರೆ ಇವರ ತಮ್ಮ ಹಾಗು ಅಣ್ಣ ತನ್ನ ಹೆಂಡತಿ ಮಕ್ಕಳೊಂದಿಗೆ ಹೈದ್ರಾಬಾದನಲ್ಲಿ ಕೂಲಿ ಕೆಲಸ ಮಾಡಿಕೊಂಡಿರುತ್ತಾರೆ. ತಮ್ಮನಾದ ಭೀಮಶಂಕರ ತಂದೆ ಸಿದ್ದರಾಮ ರಾಮಶೆಟ್ಟಿ ವಯ:30 ವರ್ಷ, ಉ:ಪೇಂಟಿಂಗ ಸಾ:ಕೇರಿ ಭೋಸಗಾ ಸದ್ಯ ಚಂದ್ರಮ ಗುಟ್ಟ ಹೈದ್ರಾಬಾದ ಇತನು ತನ್ನ ಹೆಂಡತಿ ಅಂಬಿಕಾ ಮಕ್ಕಳಾದ ಭೂಮಿಕಾ ವಯ:03 ವರ್ಷ, ಶ್ವೇತ ವಯ:07 ತಿಂಗಳ ಮಕ್ಕಳೊಂದಿಗೆ ಹೈದ್ರಾಬಾದನಲ್ಲಿ ಪೇಂಟಿಂಗ ಕೆಲಸ ಮಾಡಿಕೊಂಡಿರುತ್ತಾನೆ. ಭೀಮಶಂಕರನು ಮೂರು-ನಾಲ್ಕು ದಿವಸಗಳಿಂದ ಹೈದ್ರಾಬಾದನಲ್ಲಿ ಮಾನಸಿಕ ಖಿನ್ನತೆಗೆ ಒಳಗಾಗಿ ತನ್ನ ಹೆಂಡತಿ ಮಕ್ಕಳಿಗೆ ಬೈಯುವುದು ಚೀರಾಡುವುದು, ಹೊಡೆಯುವುದು, ಕಚ್ಚುವುದು ಮಾಡುತ್ತಿದ್ದರಿಂದ ಅಣ್ಣ ರಾಜಕುಮಾರನು ಭೀಮಶಂಕರನಿಗೆ ತನ್ನ ಹೆಂಡತಿ ಮಕ್ಕಳೊಂದಿಗೆ ಹೆಂತಿಯ ತವರು ಮನೆ ಚಿಟಗುಪ್ಪಾಕ್ಕೆ ಹೋಗಿ ಇಲಾಜ ಮಾಡಿಕೊಂಡು ಬಾ ಅಂತಾ ಹೇಳಿ ಕಳುಹಿಸಿರುತ್ತಾನೆ. ಹೀಗಿರುವಾಗ ದಿನಾಂಕ:30/10/2022 ರಂದು ಮುಂಜಾನೆ 07.00 ಗಂಟೆಯ ಸುಮಾರಿಗೆ ಭೀಮಶಂಕರನು ಮಾನಸಿಕ ಖಿನ್ನತೆಗೆ ಒಳಗಾಗಿದ್ದರಿಂದ ತನ್ನ ಹೆಂಡತಿಯ ಕೆಳಗಡೆ ತುಟಿಯನ್ನು ಕಚ್ಚಿರುತ್ತಾನೆ. ಹಾಗು ಹೆಂಡತಿಯ ತಂಗಿಯಾದ ಅಂಕಿತಳಿಗು ಸಹ ಕೈಯಿಂದ ಕೇವರಿದ ಗಾಯವಾಗಿದ್ದು ಅಂಬಿಕಾ ರವರು ಆಸ್ಪತ್ರೆಗೆ ಹೋದಾಗ ಮನೆಯಲ್ಲಿ ಯಾರು ಇಲ್ಲದ್ದಿದ್ದಾಗ ಮನೆಯ ಒಳಗಿನ ಕೊಂಡಿ ಹಾಕಿಕೊಂಡು ಉಳ್ಳಗಡ್ಡಿ ಕೊಯ್ಯುವ ಚಾಕುವಿನಿಂದ ತನ್ನ ಕತ್ತನ್ನು ಕೊಯಿದುಕೊಂಡು ಮೃತ್ತ ಪಟ್ಟಿರುತ್ತಾನೆ. ಸಾವಿನ ಬಗ್ಗ ಯಾರ ಮೇಲೆ ಯಾವುದೆ ಸಂಶಯ ಇರುವುದಿಲ್ಲ. ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.